ನಿಧಾನವಾಗಿ, ರಸ್ತೆಯ ಒಂದು ತುದಿಯುಲ್ಲಿ ಸುರಕ್ಷಿತವಾಗಿ ನಿಮ್ಮ ಗಾಡಿ ಓಡಿಸುತ್ತಿದ್ದೀರೆಂದರೆ, ನೀವು ಧನ್ಯವಾದ ಹೇಳಬೇಕಿರುವುದು ಬಸ್ಸಿಗೆ... ಬಸ್ಸಾಯ ನಮೋ ನಮಃ.

ಒಂದು ಸ್ಟಾಪಿಂದ ಇನ್ನೊಂದು ಸ್ಟಾಪಿಗೆ ಓಡುವ ಬಸ್ಸುಗಳ ಓಟ ನೋಡಿಯೇ ಓಟಗಾರ್ತಿ ಪಿ.ಟಿ. ಉಷಾ ಸ್ಫೂರ್ತಿಗೊಂಡು ಓಡೋಕೆ ಕಲಿತದ್ದು ಇದ್ದರೂ ಇರಬಹುದು. ಯಶಸ್ವಿಯಾದ ಕೆಲವರು ತಮ್ಮ ಗುಟ್ಟು ಬಿಟ್ಟುಕೊಡುವುದಿಲ್ಲ ಅಂತಾರೆ. ಅವರು ಬಹಿರಂಗಗೊಳಿಸಿಲ್ಲವಾದರೂ, ಬಸ್ಸು 'ಮಾ ಫಲೇಶು ಕದಾಚನ' ಎಂದುಕೊಂಡು ತನ್ನ ಕರ್ತವ್ಯ ನಿಭಾಯಿಸುತ್ತ, ಅನೇಕರಿಗೆ ಉತ್ಸಾಹ ತುಂಬುತ್ತಲಿದೆ.

ಹಲವಾರು ವರ್ಷಗಳಿಂದ ಹಾಳಾಗಿ ನಿಂತ ಬಸ್ಸೊಂದು ಆಕ್ರಮಿಸಿಕೊಂಡಿದ್ದ ಜಾಗ, ಮೊನ್ನೆ ಅಕ್ರಮ ಸಕ್ರಮದಲ್ಲಿ, ಸೈಟ್ ಆಗಿ ಪರಿವರ್ತನೆಗೊಂಡು, ಬಸ್ ಮಾಲೀಕ ಬಸ್ಯಾ, ಬಹುಮಹಡಿ ಇಮಾರತು ಕಟ್ಟಿ, 'ಬಸ್ ಮಹಲ್' ಎಂದು ಹೆಸರಿಟ್ಟಿದ್ದು ಇತ್ತೀಚಿನ ಕತೆ.

ಆಟೊಗಳಂತೆ, 'ನಾವು ಅಲ್ಲಿಗೆ ಬರೋಲ್ಲ, ಇಲ್ಲಿಗೆ ಹೋಗೋಲ್ಲ' ಎಂದೆಲ್ಲ ಯಾರನ್ನೂ ಗೋಳು ಹೊಯ್ದುಕೊಳ್ಳುವುದಿಲ್ಲ ಬಸ್ಸು. ಬಸ್ಸಿನ ಹಣೆಗೆ ಬೋರ್ಡ್ ಬಿದ್ದರೆ ಮುಗಿಯಿತು. ಪೂರ್ವ ನಿರ್ಧರಿತ ಸ್ಥಳಕ್ಕೆ ಹೊರಟೇತೀರುತ್ತದೆ. ತನ್ನ ವಿಶಾಲಾಕೃತಿಯಂತೆ ಅದರ ದಿಲ್ ಕೂಡ ದೊಡ್ಡದೇ. ಐವತ್ತೇ ಸೀಟಿದ್ದರೂ, ಪ್ರತಿಯೊಬ್ಬ ಪ್ರಯಾಣಿಕರನ್ನೂ ಅವರವರ ಜಾಗೆಗೆ ತಲುಪಿಸಬೇಕೆಂಬ ಒಂದೇ ಉದ್ದೇಶದಿಂದ ನೂರು ಜನರಿದ್ದರೂ ಎಲ್ಲರನ್ನೂ ಗಾಡಿಯಲ್ಲಿ ನುಗ್ಗಿಸಿಯೋ, ಟಾಪಲ್ಲಿ ಕುಳ್ಳರಿಸಿಯೋ ಕೊಂಡೊಯ್ಯುವುದರಲ್ಲಿ ಅನ್ಯಥಾ ಭಾವಿಸದಿರುವ ಬಸ್ಸಿನ ಸೇವಾ ಮನೋಭಾವವನ್ನು ನೀವು ಕಾಣಬೇಕು.

ಹಾಂ... ಒಂದು ವಿಚಾರವನ್ನು ಮರೆತೇ ಬಿಟ್ಟಿದ್ದೆ. ಬಸ್ಸಿಗೆ ಪ್ರಶಸ್ತಿ ಸಿಕ್ಕೇಬಿಟ್ಟಿತೆನ್ನಿ, ಯಾರು ಏನೇ ಹೇಳಲಿ, ಎಂಥದೇ ರಾಜಕೀಯ ಮಾಡಲಿ, ಅದು ದೊರೆತ ಪ್ರಶಸ್ತಿಯನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸುವುದಿಲ್ಲ. ಅದಕ್ಕೆ ನನ್ನ ಖಾತರಿ...

ಇಷ್ಟೆಲ್ಲಾ ಇದ್ದೂ, ನೀವು ಬಸ್ಸಿನ ಹೆಸರನ್ನು ಸೂಚಿಸಲು ಕೈ ಎತ್ತದಿದ್ದರೆ, ಬಸ್ಸಲ್ಲಿ ತಿರುಗಾಡಲೂ ನೀವು ಯೋಗ್ಯರಲ್ಲ ಬಿಡಿ.

## ನಾಗೇಶ ಜೆ. ವೈದ್ಯ

ಕನ್ನಡದ ಪ್ರಮುಖ ಪತ್ರಿಕೆಗಳಲ್ಲಿ ಕತೆ, ಕವನ, ಹಾಸ್ಯ ಬರಹ ಹಾಗೂ ಹನಿಗವನಗಳನ್ನು ನಿರಂತರವಾಗಿ ಪ್ರಕಟಿಸುತ್ತ ಬಂದಿರುವ ಲೇಖಕ ನಾಗೇಶ ವೈದ್ಯ. ಈವರೆಗೆ ಅವರ ಪ್ರಕಟಿತ ಬರಹಗಳು ಎಂಟು ನೂರಕ್ಕೂ ಹೆಚ್ಚು. ಪ್ರಸ್ತುತ ಬೆಂಗಳೂರಿನಲ್ಲಿರುವ ಕೆನರಾ ಬ್ಯಾಂಕಿನ ಪ್ರಧಾನ ಕಾರ್ಯಾಲಯದಲ್ಲಿ ಸಹಾಯಕ ಮಹಾ ಪ್ರಬಂಧಕರಾಗಿ ಕೆಲಸ ಮಾಡುತ್ತಿದ್ದಾರೆ.